::ಬೆಂಗಳೂರು ನಗರ ಜಿಲ್ಲಾ ಪಂಚಾಯತ್::

**ಉಪನಿರ್ದೇಶಕರ ಕಛೇರಿ, ಸಾರ್ವಜನಿಕ ಶಿಕ್ಷಣ ಇಲಾಖೆ, ಬೆಂಗಳೂರು ನಗರ ದಕ್ಷಿಣ ಜಿಲ್ಲೆ, ಕಲಾಸಿಪಾಳ್ಯ, ಬೆಂಗಳೂರು-2**

ಸಂಖ್ಯೆ: ಲೆಪ4(ಅನು5)/ಮಾ.ನ/42/2018-19 ದಿನಾಂಕ: 28-07-2018

**ನಮೂನೆ-3**

**(1999ರ ಮಾನ್ಯತೆ ನಿಯಮ 4 ರಂತೆ)**

ಕರ್ನಾಟಕ ಪ್ರಾನ್ಸಾಲಿಯನ್ ಸೊಸೈಟಿ, ನಂ.83/72-73, ಮರ್ಸಿಯರ್ ಫಾರಂ, ಹೆಬ್ಬಗೋಡಿ ಅಂಚೆ, ಬೆಂಗಳೂರು ಈ ಆಡಳಿತ ಮಂಡಳಿಯ ವತಿಯಿಂದ ನಡೆಯುತ್ತಿರುವ ಎಸ್.ಎಫ್.ಎಸ್ ಆಂಗ್ಲ ಪ್ರೌಢಶಾಲೆ, ಹೆಬ್ಬಗೋಡಿ, ಆನೇಕಲ್ ತಾಲ್ಲೂಕು, ಬೆಂಗಳೂರು ಈ ಪ್ರೌಢಶಾಲೆಗೆ ಕರ್ನಾಟಕ ಶಿಕ್ಷಣ ಕಾಯ್ದೆ 1983 (ಕರ್ನಾಟಕ ಆಕ್ಟ್ 1-1995) ಸೆಕ್ಷನ್ 36(6) ರಂತೆ ಈ ದಿನ ದಿ:27-07-2018 ರಂದು ಈ ಕೆಳಕಂಡ ಷರತ್ತುಗಳ ಮೇಲೆ ಅನುದಾನರಹಿತವಾಗಿ ಮಾನ್ಯತೆಯನ್ನು ನೀಡಿದೆ ಎಂದು ಪ್ರಮಾಣೀಕರಿಸಲಾಗಿದೆ.

| ನೋಂದಣಿ ಸಂಖ್ಯೆ | ಶಾಲೆಯ ವಿಳಾಸ | ಮಾನ್ಯತೆ ನೀಡಿರುವ ಮಾಧ್ಯಮ | ಶಾಲೆ ಅನುದಾನ ಸಹಿತವೇ/ ರಹಿತವೇ | ಮಾನ್ಯತೆ ನೀಡಿರುವ ವರ್ಷ | ಮಾನ್ಯತೆ ನೀಡಿರುವ ತರಗತಿಗಳು/ ವಿಭಾಗಗಳು | ಮಾನ್ಯತೆ ನೀಡುವ ಬಗ್ಗೆ ಶಿಫಾರಸ್ಸು ಮಾಡಿದ ಅಧಿಕಾರಿಗಳ ಹೆಸರು/ಪದನಾಮ |
|---|---|---|---|---|---|---|
| ಸರ್ಕಾರದ ಅಧೀನ ಕಾರ್ಯದರ್ಶಿಗಳು ಶಿಕ್ಷಣ ಇಲಾಖೆ ರವರ ಪತ್ರ ಸಂಖ್ಯೆ: ಇಡಿ 1112 ಎಸ್‌ಇಎಸ್.91 ದಿ: 31/7/1992 | ಎಸ್.ಎಫ್.ಎಸ್ ಆಂಗ್ಲ ಪ್ರೌಢಶಾಲೆ, ಹೆಬ್ಬಗೋಡಿ, ಆನೇಕಲ್ ತಾಲ್ಲೂಕು | ಆಂಗ್ಲ ಮಾಧ್ಯಮ | ಅನುದಾನ ರಹಿತವಾಗಿ | 2018-2019 ನೇ ಸಾಲಿನಿಂದ 2027-2028 ರವರೆಗೆ | 8, 9 ಮತ್ತು 10 ನೇ ತರಗತಿಗೆ ತಲಾ ಮೂರು ವಿಭಾಗದಂತೆ ಒಟ್ಟು ಒಂಭತ್ತು ವಿಭಾಗಗಳಿಗೆ | ಶ್ರೀ ಕೆ.ಸಿ.ರಮೇಶ ಕ್ಷೇತ್ರ ಶಿಕ್ಷಣಾಧಿಕಾರಿಗಳು, ಆನೇಕಲ್ ತಾಲ್ಲೂಕು |

ಷರತ್ತುಗಳು:-

1. ಶಿಕ್ಷಣ ಕಾಯ್ದೆಯ ಎಲ್ಲಾ ನಿಯಮಗಳನ್ನು ಸರ್ಕಾರಿ ಮತ್ತು ಇಲಾಖಾ ಆದೇಶಗಳನ್ನು ಕಟ್ಟುನಿಟ್ಟಾಗಿ ಪಾಲಿಸಬೇಕು.
2. ನೇಮಕಾತಿಗಳನ್ನು ಸರ್ಕಾರಿ ಆದೇಶದ ಪ್ರಕಾರ ಮಾಡತಕ್ಕದ್ದು.
3. ಇಲಾಖಾ ನಿಯಮದಂತೆ ಮಾತ್ರ ಶುಲ್ಕ ವಸೂಲಿ ಮಾಡುವುದು ಮತ್ತು ಇದರ ಲೆಕ್ಕ ಪತ್ರಗಳನ್ನು ನಿರ್ವಹಿಸಿ ಶಾಲೆಯ ಹೆಸರಿನಲ್ಲಿಟ್ಟು ಶಾಲಾ ತನಿಖಾ ಸಮಯದಲ್ಲಿ ಹಾಜರುಪಡಿಸತಕ್ಕದ್ದು.
4. ಅವಧಿ ಮುಗಿದಿರುವ ಸ್ಥಿರನಿಧಿಯನ್ನು ನವೀಕರಿಸಿಕೊಳ್ಳಬೇಕು.
5. ಅನುದಾನ ಸಂಹಿತೆ ಪ್ರಕಾರ ಶಾಲೆಯ ಎಲ್ಲಾ ಅವಶ್ಯಕತೆಗಳನ್ನು ಆಡಳಿತ ಮಂಡಳಿಯವರು ತಕ್ಷಣ ಪೂರೈಸಬೇಕು.
6. ಶಾಲಾ ಕಟ್ಟಡ ಬೆಂಕಿ ಹಾಗೂ ವಿದ್ಯುತ್ ಅವಘಡಗಳಿಂದ ಮುಕ್ತ ಮಾಡಲು ಮುನ್ನೆಚ್ಚರಿಕೆ ಕ್ರಮ ತೆಗೆದುಕೊಳ್ಳತಕ್ಕದ್ದು. ಅಗ್ನಿಶಾಮಕಗಳನ್ನು ಅಳವಡಿಸುವುದು.
7. ನಿಗಧಿತ ವಿದ್ಯಾರ್ಹತೆ ಹೊಂದಿದ ಶಿಕ್ಷಕರಿಂದ ಮಾತ್ರ ಬೋಧನಾ ಚಟುವಟಿಕೆಗಳನ್ನು ನಡೆಸತಕ್ಕದ್ದು.
8. ಮಕ್ಕಳ ರಕ್ಷಣೆ/ಸುರಕ್ಷತೆ ಬಗ್ಗೆ ಕ್ರಮ ಕೈಗೊಳ್ಳುವುದು ಕಡ್ಡಾಯವಾಗಿರುತ್ತದೆ.
9. ಶಾಲಾ ಕಟ್ಟಡ ನಿರ್ಮಾಣ/ಕಟ್ಟಡದ ಮೇಲೆ ಕೊಠಡಿ ನಿರ್ಮಾಣ ಹಾಗೂ ದುರಸ್ತಿ ಕಾರ್ಯಗಳನ್ನು ಶಾಲಾ ಅವಧಿಯ ದಿನಗಳಲ್ಲಿ ಕೈಗೆತ್ತಿಕೊಳ್ಳಬಾರದು
10. ಶಾಲಾ ಬೋಧಕ/ಬೋಧಕೇತರ ಸಿಬ್ಬಂದಿಗಳಿಗೆ ಅವರ ಹುದ್ದೆಗೆ ಅನ್ವಯವಾಗುವ ವೇತನ ಶ್ರೇಣಿಯ ಕನಿಷ್ಠ ವೇತನ ನೀಡುವುದು.ಬ್ಯಾಂಕ್ ಮೂಲಕ ವೇತನ ಪಾವತಿಸುವುದು ಹಾಗೂ ಸೇವಾ ಭದ್ರತೆ ಒದಗಿಸುವುದುಕಡ್ಡಾಯವಾಗಿರುತ್ತದೆ.
11. ಶಾಲೆಯಲ್ಲಿ ಕಡ್ಡಾಯವಾಗಿ "ಅಗ್ನಿನಂದಕ" ಅಳವಡಿಸುವುದು.
12. ಕಟ್ಟಡದ ಬಗ್ಗೆ ನ್ಯಾಷನಲ್ ಬಿಲ್ಡಿಂಗ್ ಕೋಡ್ ಆಫ್ ಇಂಡಿಯಾ 2005ರಲ್ಲಿನ ಸೂಚನೆಗಳನ್ನು ಕಡ್ಡಾಯವಾಗಿ ಪಾಲಿಸುವುದು.
13. ಶಿಕ್ಷಣ ಕಾಯ್ದೆಯನ್ವಯ ವಿದ್ಯಾರ್ಥಿಗಳ ಸಂಖ್ಯೆ ಇರಬೇಕು ಮತ್ತು ಇಲಾಖೆಯು ನಿಗಧಿಪಡಿಸಿರುವ ಪಠ್ಯಕ್ರಮಗಳನ್ನು ಅನುಸರಿಸಬೇಕು ಹಾಗೂ ಬೋಧಿಸಬೇಕು ಹಾಗೂ ಅಗತ್ಯವಾದ ಸ್ಥಳಾವಕಾಶ, ಪಾಠೋಪಕರಣ, ಪೀಠೋಪಕರಣ ಹಾಗೂ ಆಟದ ಮೈದಾನ ಇವುಗಳನ್ನು ಒದಗಿಸಬೇಕು.
14. ನಿಯಮಾನುಸಾರ ಸಂಬಂಧಪಟ್ಟ ಪ್ರಾಧಿಕಾರಕ್ಕೆ ಆಡಿಟ್ ರಿಪೋರ್ಟ್ ಸಲ್ಲಿಸಿ ಅನುಮೋದನೆ ಪಡೆದಿರಬೇಕು.
15. ಕರ್ನಾಟಕ ಶಿಕ್ಷಣ ಕಾಯ್ದೆಯನ್ವಯ ಎಲ್ಲಾ ಮಾನ್ಯತೆ ನಿಯಮಗಳನ್ನು ಪಾಲಿಸತಕ್ಕದ್ದು. ತಪ್ಪಿದಲ್ಲಿ ನಿಯಮಾನುಸಾರ ಮಾನ್ಯತೆಯನ್ನು ಹಿಂತೆಗೆದುಕೊಳ್ಳಲಾಗುವುದು.
16. ಉಚಿತ ಮತ್ತು ಕಡ್ಡಾಯ ಶಿಕ್ಷಣಕ್ಕಾಗಿ ಮಕ್ಕಳ ಹಕ್ಕು ಕಾಯ್ದೆ 2009 ಅಧಿನಿಯಮದ ಪ್ರಕಾರ ಮತ್ತು ನಿಯಮಾನುಸಾರ ಮಕ್ಕಳ ದಾಖಲಾತಿ ಮಾಡಿಕೊಳ್ಳತಕ್ಕದ್ದು.
17. ಶಾಲಾ ಮಾಹಿತಿ ಹಾಗೂ ಶಾಲಾ ವಿದ್ಯಾರ್ಥಿಗಳ ಶುಲ್ಕದ ಬಗ್ಗೆ "6*10" ಫಲಕದಲ್ಲಿ ಮಾಹಿತಿಯನ್ನು ಕಡ್ಡಾಯವಾಗಿ ಪ್ರಕಟಿಸುವುದು.

(ಬಿ.ಹೆಚ್.ಅಶ್ವಥನಾರಾಯಣ ಗೌಡ)
ಉಪನಿರ್ದೇಶಕರು(ಆಡಳಿತ)
ಬೆಂಗಳೂರು ದಕ್ಷಿಣ ಜಿಲ್ಲೆ.

ಪ್ರತಿಯನ್ನು:-

1) ಕ್ಷೇತ್ರ ಶಿಕ್ಷಣಾಧಿಕಾರಿಗಳು, ಸಾರ್ವಜನಿಕ ಶಿಕ್ಷಣ ಇಲಾಖೆ, ಆನೇಕಲ್ ತಾಲ್ಲೂಕು, ಬೆಂಗಳೂರು ದಕ್ಷಿಣ ಜಿಲ್ಲೆ ರವರಿಗೆ ಮಾಹಿತಿಗಾಗಿ.
2) ಕಾರ್ಯದರ್ಶಿಗಳು, ಕರ್ನಾಟಕ ಪ್ರಾನ್ಸಾಲಿಯನ್ ಸೊಸೈಟಿ, ಹೆಬ್ಬಗೋಡಿ ಅಂಚೆ, ಬೆಂಗಳೂರು ರವರಿಗೆ ಮುಂದಿನ ಕ್ರಮಕ್ಕಾಗಿ.
3) ಮುಖ್ಯೋಪಾಧ್ಯಾಯರು, ಎಸ್.ಎಫ್.ಎಸ್ ಆಂಗ್ಲ ಪ್ರೌಢಶಾಲೆ, ಹೆಬ್ಬಗೋಡಿ, ಆನೇಕಲ್ ತಾಲ್ಲೂಕು.
4) ಕಛೇರಿ ಪ್ರತಿ.

PRINCIPAL
**SFS ACADEMY**
Hebbagodi, Electronics City Post,
Bangalore - 560 100

MANAGER
**SFS ACADEMY**
Electronic City Post
Bangalore - 560 100